ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17 ನೇ ಸಾಲಿನಲ್ಲಿ " ಲಿಂಬೆ ಅಭಿವೃದ್ಧಿ ಮಂಡಳಿ " ಯನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: ತೋಟಗಾರಿಕೆ ಆಯುಕ್ತರ ಪತ್ರ ಸಂಖ್ಯೆ:ತೋಇ:ತೋಅನಿ:ಹಣ್ಣು:ತಾಸ:63:2014-15/206,
ದಿನಾಂಕ:28.07.2016, 24.01.2017 ಮತ್ತು 30.01.2017.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಲಿಂಬೆ ಬೆಳೆಯು ಕರ್ನಾಟಕ ರಾಜ್ಯದ ಪ್ರಮುಖವಾದ ವಾಣಿಜ್ಯ ಹಣ್ಣಿನ ಬೆಳೆಗಳಲ್ಲಿ ಒಂದಾಗಿದೆ. ಪ್ರಸ್ತುತ, ಔಷಧೀಯ ಗುಣಗಳನ್ನು ಹೊಂದಿರುವ ನಿಂಬೆ ಹಣ್ಣಿನಿಂದಾಗುವ ಪ್ರಯೋಜನದಿಂದಾಗಿ ಜಗತ್ತಿನಾದ್ಯಂತ ಈ ಬೆಳೆಯ ಉತ್ಪಾದನೆಯು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ರಾಜ್ಯದಲ್ಲಿ ಲಿಂಬೆ ಬೆಳೆಯನ್ನು ಒಟ್ಟು 11,752 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ವಾರ್ಷಿಕ 2,74,814 ಟನ್ ಗಳ ಉತ್ಪಾದನೆಯಾಗುತ್ತಿದೆ. ವಿಜಯಪುರ ಜಿಲ್ಲೆಯೊಂದರಿಂದಲೇ ಶೇ.58% ರಷ್ಟು ಪ್ರದೇಶದಲ್ಲಿ ಲಿಂಬೆ ಬೆಳೆಯಲಾಗುತ್ತದೆ. ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ " ಲಿಂಬೆ ಅಭಿವೃದ್ಧಿ ಮಂಡಳಿ " ಸ್ಥಾಪಿಸುವ ಕುರಿತು ತೋಟಗಾರಿಕೆ ಆಯುಕ್ತರು ಪ್ರಸ್ತಾವನೆಯನ್ನು ಸಿದ್ಧಿಪಡಿಸಿ ಸರ್ಕಾರದ ಮಂಜೂರಾತಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯ ಪ್ರಮುಖ ಅಂಶಗಳು ಕೆಳಕಂಡಂತಿರುತ್ತವೆ.

1) ಇತ್ತೀಚಿನ ವರ್ಷಗಳಲ್ಲಿ ಭಾರತದಿಂದ ಲಿಂಬೆ ಹಣ್ಣುಗಳ ರಫ್ತು ಹೆಚ್ಚಾಗುತ್ತಿದ್ದು, 2013-14 ನೇ ಸಾಲಿನಲ್ಲಿ ರೂ.52 ಕೋಟಿ ಮೌಲ್ಯದ ವಿದೇಶಿ ವಿನಿಮಯ ಗಳಿಸಿದೆ.

2) ಆರೋಗ್ಯದ ಕುರಿತು ಗ್ರಾಹಕರಲ್ಲಿ ಹೆಚ್ಚುತ್ತಿರುವ ತಿಳುವಳಿಕೆಯಿಂದಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಲಿಂಬೆ ಹಣ್ಣಿಗೆ ಬೇಡಿಕೆ ಹೆಚ್ಚಾಗುತ್ತಿದೆ.

3) ಲಿಂಬೆ ಬೆಳೆಯನ್ನು ಕಡಿಮೆ ಫಲವತ್ತತೆ ಜಮೀನಿನಲ್ಲಿ ಅತಿ ಕಡಿಮೆ ನೀರಿದ್ದರೂ ಸಹಾ ಬೆಳೆಯಬಹುದಾಗಿರುವ ಕಾರಣ ಮತ್ತು ಮಾರುಕಟ್ಟೆ ದರದಲ್ಲಿ ಕೂಡಾ ಹೆಚ್ಚಿನ ಏರಿಳಿತವಿರದ ಕಾರಣ ಸಣ್ಣ ಮತ್ತು ಅತೀ ಸಣ್ಣ ರೈತರು ಸಹಾ ಲಿಂಬೆ ಬೆಳೆ ಬೆಳೆಯಲು ಒಲವು ತೋರುತ್ತಿದ್ದು, ಕಳೆದ 3-4 ವರ್ಷಗಳಲ್ಲಿ 1000-500 ಹೆಕ್ಟೇರ್ ಪ್ರದೇಶ ವಿಸ್ತರಣೆಗೆ ಕಾರಣವಾಗಿರುತ್ತದೆ.

5) ತಾಜಾ ಹಣ್ಣನ್ನು ರಫ್ತು ಮಾಡಲು ಉತ್ತೇಜಿಸುವುದರ ಜೊತೆಗೆ ವಿವಿಧ ಸಂಸ್ಕರಣಾ ಉತ್ಪನ್ನಗಳಾದ ಉಪ್ಪಿನ ಕಾಯಿ, ನಿಂಬೆ ರಸ, ಸ್ಕ್ಯಾಷ್, ಕ್ಯಾಂಡೀಸ್, ಜಾಮ್, ಜೆಲ್ಲಿಗಳನ್ನು ತಯಾರಿಸಬಹುದು. ಅಲ್ಲದೇ ಲಿಂಬೆ ಸಿಪ್ಪೆಯಿಂದ ತೆಗೆದ ಎಣ್ಣೆಯನ್ನು ಸೌಂದರ್ಯವರ್ಧಕ ಉತ್ಪನ್ನಗಳಾದ ಕೇಶತೈಲ, ಸೋಪ್, ಟೂತ್ ಪೇಸ್ಟ್, ಮೌತ್ ವಾಶ್ ಇತ್ಯಾದಿಗಳಲ್ಲಿ ಉಪಯೋಗಿಸಬಹುದಾಗಿದೆ. ಇದರಿಂದ ಸಂಸ್ಕರಣ ಉದ್ಯಮಗಳನ್ನು ಸ್ಥಾಪಿಸಿ ವಿಫುಲ ಉದ್ಯೋಗಾವಕಾಶಗಳನ್ನು ಕಲ್ಪಿಸಬಹುದು.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ತೋಇ 146 ತೋಸವಿ 2016, ಬೆಂಗಳೂರು, ದಿನಾಂಕ:15.02.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2016-17 ನೇ ಸಾಲಿನಲ್ಲಿ " ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ " ಯನ್ನು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಸ್ಥಾಪಿಸಲು ತೋಟಗಾರಿಕೆ ಆಯುಕ್ತರಿಗೆ ಅನುಮತಿ ನೀಡಲಾಗಿದೆ.

2). ಕರ್ನಾಟಕ ಲಿಂಬೆ ಅಭಿವೃದ್ಧಿ ಮಂಡಳಿಯನ್ನು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ, 1960 ರ ಅನ್ವಯ ನೊಂದಾಯಿಸಲು ಅನುಮತಿ ನೀಡಲಾಗಿದೆ. Articles of Association and Rules and Regulations ಗಳನ್ನು ತೋಟಗಾರಿಕೆ ಆಯುಕ್ತರು ರೂಪಿಸುವುದು.

3) ಸದರಿ ಮಂಡಳಿಯ ಸಿಬ್ಬಂದಿ ಮತ್ತು ವಾರ್ಷಿಕ ಅನುದಾನದ ಅಗತ್ಯಗಳ ಕುರಿತ ತೋಟಗಾರಿಕೆ ಆಯುಕ್ತರು ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವುದು.

4016

XXX/TA

A.Dir (Fruits) 17/2/17

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:PSCM/F-733/2017, ದಿನಾಂಕ:08.02.2017 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ತೋಟಗಾರಿಕೆ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು(ಎ & ಇ)/(ಜಿ & ಎಸ್.ಎಸ್.ಎ)/ (ಇ & ಆರ್.ಎಸ್.ಎ), ಕರ್ನಾಟಕ , ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌದ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ವೆಚ್ಚ), ಆರ್ಥಿಕ ಇಲಾಖೆ, ವಿಧಾನ ಸೌದ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ/ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಆಯುಕ್ತರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
7) ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ.
8) ತೋಟಗಾರಿಕೆ ಅಪರ ನಿರ್ದೇಶಕರು(ಹಣ್ಣುಗಳು), ಲಾಲ್ ಬಾಗ್, ಬೆಂಗಳೂರು.
9) ನಿರ್ದೇಶಕರು, ಹುಜೂರ್ ಖಜಾನೆ, ಪೋಡಿಯಂ ಬ್ಲಾಕ್, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4), ವಿಧಾನ ಸೌದ, ಬೆಂಗಳೂರು.
11) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.
12) ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ.
13) ಹೆಚ್ಚುವರಿ ಪ್ರತಿ: ರಕ್ಷಾ ಕಡತ.